ಓಎಸ್.135/2022

ಪಿಡಬ್ಲ್ಯು-1

ದಿನಾಂಕಃ 14-08-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>- ಪ್ರತಿವಾದಿ ಸಂಃ 2(ಎ) ರಿಂದ 2(ಇ) ಪರವಾಗಿ ಶ್ರೀ. ಆರ್.ಹೆಚ್.ಎನ್. ವಕೀಲರಿಂದಃ-**

ನಾನು ಬಿ.ಎ. ಪದವೀಧರನಾಗಿರುತ್ತೇನೆ. ದಾವಾ ಆಸ್ತಿಗಳು ನಮ್ಮ ಕುಟುಂಬದ ಪಿತ್ರಾರ್ಜಿತವಾದ ಆಸ್ತಿಗಳಾಗಿರುತ್ತದೆ. ದಾವಾ ಆಸ್ತಿಗಳು ಮೂಲತಃ ದೊಡ್ಡಪ್ಪ ಮತ್ತು ಅಕ್ಕಮ್ಮನವರಿಗೆ ಸೇರಿದ ಆಸ್ತಿಗಳಾಗಿರುತ್ತವೆ. ದೊಡ್ಡಪ್ಪ ಮತ್ತು ಅಕ್ಕಮ್ಮನವರಿಗೆ ಒಟ್ಟು ಇಬ್ಬರು ಮಕ್ಕಳುಗಳಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು, ಮೂರು ಜನ ಮಕ್ಕಳುಗಳು ಇದ್ದಾರೆ ಎಂದು ಸ್ವತಃ ನುಡಿಯುತ್ತಾರೆ. ಅವರುಗಳೆಂದರೆ, ದಾಸೇಗೌಡ, ತಿಮ್ಮಕ್ಕ ಮತ್ತು ತಿಮ್ಮದಾಸಪ್ಪ ಎಂಬುವವರಾಗಿರುತ್ತಾರೆ. ದಾಸೇಗೌಡನಿಗೆ ಪ್ರತಿವಾದಿ 1 ಮತ್ತು 2 ರವರುಗಳು ಮಕ್ಕಳುಗಳಾಗಿರುತ್ತಾರೆ. ನಾವುಗಳು ದೊಡ್ಡೇಗೌಡನ ಮಕ್ಕಳುಗಳಾಗಿರುತ್ತೇವೆ. ದಾವಾ ಆಸ್ತಿಗಳಲ್ಲಿ ದಾಸೇಗೌಡನ ಮಕ್ಕಳು ಮತ್ತು ತಿಮ್ಮದಾಸಪ್ಪನ ಮಕ್ಕಳುಗಳಿಗೆ ಸಮಾನವಾದ ಹಕ್ಕು ಇದೆ ಎಂದರೆ ಸರಿ.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್

ಓಎಸ್.135/2022

ಪಿಡಬ್ಲ್ಯು-1

ಮತ್ತು ಜೆಎಂಎಫ್‌ಸಿ, ಮಧುಗಿರಿ